# ನಮ್ಮೂರು ಚಂದವೊ; ನಿಮ್ಮೂರು ಚಂದವೊ..



ಉಗಾಂಡದ ಚೆಲುವೆ ಬೆಟ್ಟಿ ಕಾಕುಲು

ವಿದೇಶದಿಂದ ಬಂದವರಿಗೆ ಮೈಸೂರು ಅಕ್ಷರಶಃ ಸ್ವರ್ಗ. ವಿಶ್ವವಿಖ್ಯಾತ ದಸರಾ ಸಮಯದಲ್ಲಿ ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚು. ಉಳಿದ ಸಮಯದಲ್ಲೂ ವಿದೇಶೀಯರನ್ನು ಮೈಸೂರು ಸೆಳೆಯುತ್ತದೆ. ಕಾರಣ ಇಷ್ಟೆ. ಮೈಸೂರು ಪ್ರಕೃತಿ ಸಹಜ ಚೆಲುವಿನಿಂದ ಕಂಗೊಳಿಸುವ ಅದ್ಭುತ ತಾಣ.

ಮೈಸೂರನ್ನು ಪೂರ್ವ ಆಫ್ರಿಕಾದ ಉಗಾಂಡದಿಂದ ಬಂದ ಬೆಟ್ಟಿ ಕಾಕುಲು ಎಂಬ ವಿದ್ಯಾರ್ಥಿನಿ ಬಣ್ಣಿಸುವುದು ಹೀಗೆ..

'ಮೈಸೂರು ಒಂದು ಸುಂದರ ಪ್ರವಾಸಿ ತಾಣ. ಜಗತ್ತಿನ ಎಲ್ಲ ಕಡೆಯಿಂದಲೂ ಜನ ಇಲ್ಲಿಗೆ ಬಂದು ಪ್ರವಾಸಿ ತಾಣಗಳನ್ನು ನೋಡಿ ಖುಷಿ ಪಡುತ್ತಾರೆ. ಮೈಸೂರು ಅರಮನೆ, ಮೃಗಾಲಯ, ಬೃಂದಾವನ, ಕೆಆರ್‌ಎಸ್ ಅಣೆಕಟ್ಟೆ ಅಷ್ಟೇ ಅಲ್ಲದೆ ಮೈಸೂರಿನ ಪ್ರತಿಯೊಂದು ಗಲ್ಲಿಯಲ್ಲೂ ಏನೋ ಒಂಥರ ಸೆಳೆತ ಇದೆ. ವಿದೇಶೀಯರಿಗೂ ಇದೊಂದು ಪ್ರವಾಸಿ ಸ್ವರ್ಗ ಎನ್ನಬಹುದು. ಇಲ್ಲಿ ನಾನು ಶಿಕ್ಷಣದ ನಿಮಿತ್ತ ಬಂದರೂ ಬಹಳ ಎಂಜಾಯ್ ಮಾಡ್ತೀನಿ. ಮೈಸೂರನ್ನು ಯಾವುದೇ ಊರಿಗೂ ಹೋಲಿಸುವ ಹಾಗಿಲ್ಲ; ಅಷ್ಟೊಂದು ಚೆನ್ನಾಗಿದೆ.'

'ಇಲ್ಲಿನ ಹಬ್ಬ, ನಾಡಹಬ್ಬ, ಊಟ ತಿಂಡಿ ಬಹಳ ಸೊಗಸಾಗಿದೆ. ದಸರಾ, ಹೋಳಿ, ದೀಪಾವಳಿ ಹಬ್ಬಗಳಂತೂ ಬಹಳ ಸಡಗರ, ಸಂಭ್ರಮ. ದಸರಾ ಸಮಯದಲ್ಲಿ ಇಡೀ ಮೈಸೂರೇ ಕಂಗೊಳಿಸುತ್ತಿರುತ್ತದೆ. ಇದನ್ನು ನೋಡುವುದು ಕಣ್ಣಿಗೆ ಹಬ್ಬ. ಜಾತಿ, ದೇಶ, ಭಾಷೆ ಮುಂತಾದ ಎಲ್ಲೆಗಳನ್ನು ಮೀರಿ ಆಚರಿಸುವ ಈ ಹಬ್ಬ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತದೆ.'

ಉಗಾಂಡದಿಂದ 2013ರಲ್ಲಿ ಮೈಸೂರಿಗೆ ಬೆಟ್ಟಿ ಕಾಕುಲು ಬಂದ ಉದ್ದೇಶ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮ ಸ್ನಾತಕೋತ್ತರ ಪದವಿ ಅಧ್ಯಯನ. ಇಬ್ಬರು ಮಕ್ಕಳ ತಾಯಿ ಬೆಟ್ಟಿಗೆ ಮೈಸೂರು ಅತ್ಯಂತ ಪ್ರೀತಿಯ ತಾಣವಾಗಿದೆಯಂತೆ.



ಗೆಳತಿ ಮೋನಿಕಾಳೊಂದಿಗೆ ಜೋಗ ಜಲಪಾತ ವೀಕ್ಷಣೆಯ ಕ್ಷಣ..

ಹಾಗೆಂದು ಬೆಟ್ಟಿ ಅವರ ಸ್ವಂತ ಊರು ಉಗಾಂಡ ಚೆನ್ನಾಗಿಲ್ಲವೇ? ಬೆಟ್ಟಿ ಅವರ ಪ್ರಕಾರ, 'ಉಗಾಂಡ ನನ್ನ ಹುಟ್ಟೂರು. ಅದೂ ತುಂಬ ಚೆನ್ನಾಗಿದೆ. ಅಲ್ಲಿನ ಪ್ರಕೃತಿ ಸೌಂದರ್ಯ ಕೂಡ ವರ್ಣನೆಗೆ ನಿಲುಕದ್ದು. ಒಟ್ಟು ಹತ್ತು ರಾಷ್ಟ್ರೀಯ ಉದ್ಯಾನ, ಸರೋವರಗಳು, ದ್ವೀಪಗಳು ಇರುವ, ಪ್ರಕೃತಿ ಸೌಂದರ್ಯದಿಂದ ಕಂಗೊಳಿಸುವ ಪುಟ್ಟ ದೇಶವದು'.

ಉಗಾಂಡವನ್ನು ಖ್ಯಾತ ಚಿಂತಕ ಸರ್ ವಿನ್ಸಟನ್ ಚರ್ಚಿಲ್ 'ಪರ್ಲ್ ಆಫ್ ಆಫ್ರಿಕಾ'ಎಂದು ಬಣ್ಣಿಸಿದ್ದನ್ನು ನೆನಪು ಮಾಡಿಕೊಂಡರು ಈ ವಿದೇಶಿ ವಿದ್ಯಾರ್ಥಿನಿ. ಮೈಸೂರೂ ಚೆನ್ನಾಗಿದೆ, ಉಗಾಂಡವೂ ಸುಂದರವಾಗಿದೆ; ಹಾಗಿದ್ದರೆ ನಮ್ಮೂರು ಚಂದವೊ, ನಿಮ್ಮೂರು ಚಂದವೋ ಎಂದು ಕೆಣಕಿದರೆ.. 'ಎರಡೂ..' ಎಂದು ಬಾಯಿ ತುಂಬ ನಕ್ಕರು ಬೆಟ್ಟಿ.

ಬೆಟ್ಟಿ ಅವರ ತಂದೆ ಸ್ಟೀಫನ್ ಕಾಕುಲು, ತಾಯಿ ಬೆಟ್ಟಿ ಕಟಾನ ಉಗಾಂಡದಲ್ಲೇ ಇದ್ದಾರೆ. ಬೆಟ್ಟಿ ಅವರಿಗೆ ಇಬ್ಬರು ಮಕ್ಕಳು; ಮಟ್ಟ್ ಮತ್ತು ಜೆಫ್.

ಉಗಾಂಡದ ವರ್ಣನೆ ಬಳಿಕ ಮತ್ತೆ ಮೈಸೂರಿನ ಬಗ್ಗೆಯೇ ಮಾತುಕತೆ. ಮೈಸೂರಿನಲ್ಲಿ ಏನುಂಟು, ಏನಿಲ್ಲ..? ಇಲ್ಲಿನ ದೇವಸ್ಥಾನ, ಜನರ ನಂಬಿಕೆ, ವೈವಿಧ್ಯಮಯ ಭಾಷೆ, ವಿವಿಧ ರೀತಿಯ ಸ್ವಭಾವದ ಜನ, ಇಲ್ಲಿನ ಸಂಪ್ರದಾಯ, ಕುಟುಂಬ ವ್ಯವಸ್ಥೆ, ಡ್ರೆಸ್ ಕೋಡ್, ಆಹಾರ ಪದ್ಧತಿ ಎಲ್ಲವೂ ನಿಜಕ್ಕೂ ಅವರ್ಣನೀಯ ಎಂಬುದು ಬೆಟ್ಟಿ ಅವರ ಅಭಿಪ್ರಾಯ.

'ಇಲ್ಲಿ ನನಗೆ ಸಾಕಷ್ಟು ಸ್ನೇಹಿತರಿದ್ದಾರೆ. ಪತ್ರಿಕೋದ್ಯಮ ವಿಭಾಗದಲ್ಲಿ ಎಲ್ಲರೂ ಸ್ನೇಹಿತರೇ, ವಿಶ್ವವಿದ್ಯಾನಿಲಯದಲ್ಲಿ ಅನೇಕ ಫ್ರೆಂಡ್ಸ್ ಇದ್ದಾರೆ. ಚರ್ಚ್‌ನಲ್ಲೂ ಬಹಳಷ್ಟು ಜನ ಸ್ನೇಹಿತರಾಗಿದ್ದಾರೆ. ಕೆಲವು ಸ್ನೇಹಿತರು ಅವರ ಮನೆಗಳಿಗೂ ಆಹ್ವಾನಿಸಿದ್ದಾರೆ. ಹಾಗೆ ನಾನು ಶಿವಮೊಗ್ಗ, ಕೇರಳ, ಮಂಡ್ಯದಲ್ಲಿರುವ ಸ್ನೇಹಿತರ ಮನೆಗಳಿಗೂ ಹೋಗಿ ಬಂದಿದ್ದೇನೆ' ಎನ್ನುತ್ತಾರೆ ಬೆಟ್ಟಿ.

ಭಾರತದ ಅನೇಕ ಪ್ರವಾಸಿ ತಾಣಗಳನ್ನು ಬೆಟ್ಟಿ ನೋಡಿ ಬಂದಿದ್ದಾರೆ. ದೆಹಲಿ, ಮುಂಬಯಿ, ಚೆನ್ನೈ, ಕೇರಳ, ಕೋಲ್ಕತ್ತಾ, ಜೈಪುರ, ಆಗ್ರಾ, ಮನಾಲಿ ನೋಡಿದ್ದೇನೆ. ಕರ್ನಾಟಕದಲ್ಲಿ ಮಂಗಳೂರು, ಉಡುಪಿ, ಉಜಿರೆ, ಶಿವಮೊಗ್ಗ, ಮಂಡ್ಯ, ಬೆಂಗಳೂರು, ಬಂಡಿಪುರಗಳನ್ನು ವೀಕ್ಷಿಸಿದ್ದೇನೆ. ಎಲ್ಲವೂ ಬಹಳ ಚೆನ್ನಾಗಿದೆ. ಇಷ್ಟೂ ಜಾಗಗಳಲ್ಲಿ ಬಹಳ ನೆನಪಿನಲ್ಲಿ ಉಳಿಯುವ ಜಾಗಗಳೆಂದರೆ ಮನಾಲಿ ಮತ್ತು ಜೈಪುರ, ಶಿವಮೊಗ್ಗದ ಜೋಗ ಜಲಪಾತ ಇಷ್ಟವಾಯಿತು.

'ವಾರಾಂತ್ಯವನ್ನು ಗೆಳತಿಯರ ಜತೆ ಕಳೆಯುತ್ತೇನೆ, ಪುಸ್ತಕ ಓದುವುದು ಹವ್ಯಾಸ, ಬೇರೆ ಬೇರೆ ರೀತಿಯ ಊಟ ತಿಂಡಿಗಳನ್ನು ಟೇಸ್ಟ್ ಮಾಡುವುದು ಇಷ್ಟ. ಸಸ್ಯಾಹಾರಿ ಅಡುಗೆಯೇ ಹೆಚ್ಚು ಪ್ರೀತಿ. ಇಲ್ಲಿ ಟಿಬೆಟಿಯನ್, ಚೈನೀಸ್ ಅಡುಗೆಗಳೂ ಸಿಗುತ್ತವೆ. ಎಲ್ಲವೂ ಒಂದು ಅವಿಸ್ಮರಣೀಯ ಅನುಭವವನ್ನೇ ನೀಡುತ್ತಿವೆ' ಎನ್ನುವ ಬೆಟ್ಟಿಗೆ ಕನ್ನಡ ಕಲಿಯುವ ಆಸೆ. ಅರೆಬರೆ ಕನ್ನಡವನ್ನೂ ಕಲಿತಿರುವ ಬೆಟ್ಟಿಯ ಭಾಷಾ ಅಭಿಮಾನ ಮೆಚ್ಚುವಂಥದ್ದೆ.

★ ಅವನೀಶ್